**ದಿನಾಂಕ 04.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .**

**ಪಾಟೀ ಸವಾಲುಃ ಆರೋಪಿ ಪರ ಮಾನ್ಯ ವಕೀಲರಿಂದ.**

ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ, ಆದರೆ ಸಣ್ಣಪುಟ್ಟ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. ನನಗೆ ಬಾಡಿಗೆ ಮನೆಗಳಿಂದ ಬಾಡಿಗೆ ಬರುತ್ತದೆ. ನನಗೆ ತಿಂಗಳಿಗೆ ರೂ.80,000/- ಆದಾಯ ಇದೆ. ಈ ಬಗ್ಗೆ ದಾಖಲಾತಿ ಇದೆ. ನಾನು ಆದಾಯ ತೆರಿಗೆ ಪಾವತಿದಾರನಾಗಿದ್ದೇನೆ. ನಿಪಿ 10 ರ ಪ್ರಕಾರ ನಾನು ಬ್ಯಾಂಕಿನಿಂದ ರೂ.20,00,000/- ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿ. ನನ್ನ ವಯಕ್ತಿಕ ಕಾರಣಗಳಿಗಾಗಿ ನಾನು ಸದರಿ ಸಾಲವನ್ನು ಪಡೆದುಕೊಂಡಿದ್ದೇನೆ. ನಾನು ಸಾಲ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರವನ್ನು ಮಾಡುತ್ತಿಲ್ಲ. ಬಸವರಾಜು, ಆರೋಪಿ ಮತ್ತು ನಾನು ಸ್ನೇಹಿತರು. ಬಸವರಾಜುರವರು 2009 ರಿಂದ ನನಗೆ ಪರಿಚಯಸ್ಥರು. ರೂ.4,00,000/- ಗಳನ್ನು ಬಸವರಾಜುರವರ ಮೂಲಕ ನಾನು ನನ್ನ ಹಣವನ್ನು ಆರೋಪಿಗೆ ಆರ್.ಟಿ.ಜಿ.ಎಸ್ ಮೂಲಕ ಕಳುಹಿಸಿದ್ದೇನೆ. ಬಸವರಾಜುರವರು ನನಗೆ ನನಗೆ 4 ಲಕ್ಷ ಹಣ ಕೊಡಬೇಕಾಗಿತ್ತು, ಅದನ್ನು ನಾನು ನೇರವಾಗಿ ಆರೋಪಿಗೆ ಆರ್.ಟಿ.ಜಿ.ಎಸ್ ಮಾಡುವಂತೆ ಹೇಳಿದ್ದೇನೆ, ಕಾರಣ ಆರೋಪಿ ತುರ್ತಾಗಿ ಹಣ ಬೇಕು ಎಂದು ಕೇಳಿದ್ದರು. ನಾನು ಬಸವರಾಜುರವರಿಗೆ ಸಾಲ ಕೊಟ್ಟಿರಲಿಲ್ಲ, ಆದರೆ ಅವರು ಸಹಾಯ ಕೇಳಿದ್ದರು, ಆದ ಕಾರಣ ಹಣ ನೀಡಿದ್ದೆ. ಬಸವರಾಜುರವರಿಗೆ ಹಣ ನೀಡಿದ ದಿನಾಂಕ ನೆನಪಿಲ್ಲ. ಸಾಕ್ಷಿಯು ಮುಂದುವರೆದು ನಾನು ಬ್ಯಾಂಕಿನಿಂದ ಸಾಲ ಪಡೆದಾಗ ನೀಡಿದ್ದೇನೆ ಎಂದು ತಿಳಿಸಿರುತ್ತಾರೆ. ಬಸವರಾಜುರವರಿಗೆ ನಾನು ಸಾಲ ನೀಡಿದ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ. ಬಸವರಾಜುರವರ ಮೂಲಕ ರೂ.4,00,000/- ಗಳನ್ನು ಆರೋಪಿಗೆ ಆರ್.ಟಿ.ಜಿ.ಎಸ್ ಮಾಡಿಸಿದ ಬಗ್ಗೆ

This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-2.pdf

ನೋಟೀಸಿನಲ್ಲಿ ಹೇಳಿದ್ದೇನೆ. ಈ ವಿಚಾರವನ್ನು ನಮ್ಮ ವಕೀಲರಿಗೆ ತಿಳಿಸಿದ್ದೇನೆ. ಬಸವರಾಜುರವರಿಗೂ, ಬಸವರಾಜುರವರು ರೂ.4,00,000/- ಗಳನ್ನು ಆರೋಪಿಗೆ ನೀಡಿದ್ದಕ್ಕೂ, ನನಗೂ ಯಾವುದೇ ಸಂಬಂಧ ಇಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವರಾಜು ಮತ್ತು ನಾನು ಶಾಮೀಲಾಗಿ ಆರೋಪಿಯ ವಿರುದ್ದ ಸುಳ್ಳು ಕೇಸನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ನೀಡಿದಾಗ ಭದ್ರತೆಗಾಗಿ ಯಾವುದೇ ದಾಖಲಾತಿಯನ್ನು ಪಡೆದುಕೊಳ್ಳಲಿಲ್ಲ. ಆರೋಪಿ ನನ್ನಿಂದ ಕೇವಲ ರೂ.2,00,000/- ಗಳನ್ನು ಮಾತ್ರ ಸಾಲವಾಗಿ ಪಡೆದಿದ್ದರು, ಆಗ ಆರೋಪಿಯಿಂದ ಭದ್ರತೆಗಾಗಿ ಖಾಲಿ ಚೆಕ್ಕುಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸಾಲ ತೀರುವಳಿ ಮಾಡಿದ ನಂತರ ನಾನು ಖಾಲಿ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ದ ಈ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ರೂ.2,00,000/- ಗಳನ್ನು ಮರುಪಾವತಿಸಿದ ನಂತರ ಆರೋಪಿ ಭದ್ರತೆಗಾಗಿ ನೀಡಿದ್ದ ಚೆಕ್ಕುಗಳನ್ನು ವಾಪಸ್ಸು ಕೊಡಿ ಎಂದು ಕೇಳಿದರು ಎಂದರೆ ಸರಿಯಲ್ಲ. ನಾನು ಸದರಿ ಚೆಕ್ಕುಗಳನ್ನು ಹಿಂದಿರುಗಿಸದೇ ಸುಳ್ಳು ಮೊತ್ತವನ್ನು ಭರ್ತಿ ಮಾಡಿ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

(ಓ.ಹೇ.ಕೇ.ಸ.ಇ.ಒ)

**(ಪುರುಷೋತ್ತಮ ಎಂ.)**

**12 ನೇ ಎಸ್‌ಸಿಜೆ ಮತ್ತು ಎಸಿಎಮ್‌ಎಮ್**

This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-2.pdf

ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-2.pdf

www.ecourtsindia.com